# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀಮತಿ ಶೈನಾಜ ಅಸ್ಕರ ಜಮಖಾನೆ, ಅಧ್ಯಕ್ಷರು, ಉಗಾರ ಬಿ.ಕೆ. ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 48(4) ಮತ್ತು 43(ಎ) ರನ್ವಯ ಕ್ರಮ ಜರುಗಿಸುವ ಬಗ್ಗೆ.

ಓದಲಾಗಿದೆ:

1) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ. Compt/UPLOK/BGM-1652/2016/PP, ದಿನಾಂಕ:14.06.2018
2) ಇದೇ ಸಮಸಂಖ್ಯೆಯ ಕಾರಣ ಕೇಳುವ ನೋಟಿಸ್, ದಿನಾಂಕ: 30.06.2018
3) ಶ್ರೀಮತಿ ಶೈನಾಜ ಅಸ್ಕರ ಜಮಖಾನೆ, ಅಧ್ಯಕ್ಷರು, ಉಗಾರ ಬಿ.ಕೆ. ಗ್ರಾಮ ಪಂಚಾಯತಿ ಇವರು ಕಾರಣ ಕೇಳಿ ನೋಟೀಸಿಗೆ ಸಲ್ಲಿಸಿರುವ ಲಿಖಿತ ಹೇಳಿಕೆ, ದಿನಾಂಕ 23.07.2018
4) ಇದೇ ಸಮಸಂಖ್ಯೆಯ ವಿಚಾರಣೆಗೆ ಹಾಜರಾಗಲು ತಿಳುವಳಿಕೆ ಪತ್ರ, ದಿನಾಂಕ 15.11.2018

ಪ್ರಸ್ತಾವನೆ:

1) ಮೇಲೆ ಓದಲಾದ (1) ರಲ್ಲಿ, ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರದ ಸಂಗಡ ಕಳುಹಿಸಿರುವ ಮಾನ್ಯ ಉಪಲೋಕಾಯುಕ್ತರು ದಿನಾಂಕ: 30.05.2018 ರಂದು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ಸಲ್ಲಿಸಿರುವ ವರದಿಯಲ್ಲಿ ಶ್ರೀ ವಜ್ರಕುಮಾರ್, ಉಗಾರ ಬಿ.ಕೆ., ಅಥಣಿ ತಾಲ್ಲೂಕು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು, ಶ್ರೀಮತಿ ಸುರೇಖ ಶ್ರೀಶೈಲ ಇಂಡಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಉಗಾರ ಬಿ.ಕೆ. ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ (ಇನ್ನು ಮುಂದೆ 'ಎದುದಾರರು 1' ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿ, ಉಗಾರ ಬಿ.ಕೆ. ಗ್ರಾಮ ಪಂಚಾಯತಿಯಲ್ಲಿ 2015-16ನೇ ಸಾಲಿನ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ಖೊಟ್ಟಿ ದಾಖಲೆ ಸೃಷ್ಟಿಸುವ ಮೂಲಕ ಹಾಗೂ ಖೊಟ್ಟಿ ಕೂಲಿ ಕಾರ್ಮಿಕರನ್ನು ಸೃಷ್ಟಿಸುವ ಮೂಲಕ ರೂ.21,59,413/- ಗಳ ಅವ್ಯವಹಾರ ಎಸಗಿರುವುದು ಹಾಗೂ ಸ್ವಚ್ಛ ಭಾರತ್ ಮಿಷನ್‌ನಡಿ ಶೌಚಾಲಯ ನಿರ್ಮಿಸದೆ ಇತರೆ ಫಲಾನುಭವಿಗಳ ಶೌಚಾಲಯ ತೋರಿಸಿ ಗ್ರಾಮ ಫಂಚಾಯತಿ ಸದಸ್ಯರಿಗೆ ಸಹಾಯಧನ ನೀಡಿ ಹಣ ದುರುಪಯೋಗ ಮಾಡಿಕೊಂಡಿರುವ ಆರೋಪದ ಮೇಲೆ ಇವರ ವಿರುದ್ಧ ಲೋಕಾಯುಕ್ತ ಸಂಸ್ಥೆಗೆ ದೂರು ನೀಡಿರುತ್ತಾರೆ.

2) ಈ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 9 ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದು, ಕಡತ ಮತ್ತು ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ತನಿಖಾಧಿಕಾರಿಗಳು ಆರೋಪಗಳು ಸಾಬೀತಾಗಿರುವುದಾಗಿ ವರದಿ ನೀಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಶ್ರೀಮತಿ ಸುರೇಖ ಶ್ರೀಶೈಲ ಇಂಡಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಉಗಾರ ಬಿ.ಕೆ. ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಲೋಕಾಯುಕ್ತ ಸಂಸ್ಥೆಗೆ ವಹಿಸಲು ಹಾಗೂ ಅಂದಿನ ಗ್ರಾಮ ಪಂಚಾಯತಿ ಅಧ್ಯಕ್ಷರ ವಿರುದ್ಧ ಶ್ರೀಮತಿ ಶೈನಾಜ ಅಸ್ಕರ ಜಮಖಾನೆ ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರಡಿ ಕ್ರಮ ಜರುಗಿಸಲು ಮಾನ್ಯ ಉಪಲೋಕಾಯುಕ್ತರು ಶಿಫಾರಸ್ಸು ಮಾಡಿರುತ್ತಾರೆ.

3) ಮೇಲೆ ಒದಲಾದ (2) ರಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 48(4) ಮತ್ತು 43(ಎ) ರನ್ವಯ ಕ್ರಮ ಜರುಗಿಸಿ, ಗ್ರಾಮ ಪಂಚಾಯತಿ ಅಧ್ಯಕ್ಷ ಮತ್ತು ಸದಸ್ಯ ಸ್ಥಾನದಿಂದ ಏಕೆ ತೆಗೆದು ಹಾಕಬಾರದು ಎಂಬುದರ ಬಗ್ಗೆ ವಿವರಣೆ ನೀಡುವಂತೆ ಸದರಿ ಆಪಾದಿತ ಅಧ್ಯಕ್ಷರಿಗೆ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಲಾಗಿತ್ತು.

4) ಮೇಲೆ ಓದಲಾದ (3) ರಲ್ಲಿ ಸದರಿ ಗ್ರಾಮ ಪಂಚಾಯತಿ ಅಧ್ಯಕ್ಷರು ಸರ್ಕಾರದಿಂದ ಜಾರಿಗೊಳಿಸಲಾಗಿದ್ದ ಕಾರಣ ಕೇಳಿ ನೋಟಿಸಿಗೆ ಕೆಳಗಿನಂತೆ ಉತ್ತರವನ್ನು ಸಲ್ಲಿಸಿರುತ್ತಾರೆ.

"ಸನ್ 2015-16 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲಾದ ಎಲ್ಲ ನರೇಗಾ ಕಾಮಗಾರಿಗಳನ್ನು ಗ್ರಾಮ ಸಭೆಯಲ್ಲಿ ಆಯ್ಕೆಮಾಡಲಾಗಿರುತ್ತದೆ. ಅನುಮೋದಿತ ಕ್ರಿಯಾ ಯೋಜನೆಯಿಂದ ಆದ್ಯತೆಗೆ ಅನುಸಾರ ಅಂದಾಜು ಪತ್ರಿಕೆಗಳನ್ನು ತಯಾರಿಸಿ ಕೂಲಿ ಬೇಡಿಕೆಯ ಆಧಾರದ ಮೇಲೆ ಕೂಲಿಕಾರರ ಮೂಲಕ ಕಾಮಗಾರಿಗಳನ್ನು ನಿರ್ವಹಿಸಲಾಗಿರುತ್ತದೆ. ಹಾಗೂ ಸಂಬಂಧಿಸಿದ ಕೂಲಿಕಾರರ ಬ್ಯಾಂಕ್ ಖಾತೆಗಳಿಗೆ ಕೂಲಿ ಹಣ ಜಮೆಯಾಗಿರುತ್ತದೆ. ಸಂಬಂಧಿಸಿದ ಕಾಮಗಾರಿಗಳಿಗೆ ಅವಶ್ಯಕವಿರುವ ಸಾಮಗ್ರಿಗಳನ್ನು ಕೆ.ಟಿ.ಪಿ.ಪಿ ಅಧಿನಿಯಮಾನುಸಾರ ಖರೀದಿಸಿ ,ದಾಸ್ತಾನು ಮತ್ತು ವಿತರಣೆ ವಹಿಯನ್ನು ನಿರ್ವಹಿಸಿ ಬಳಕೆ ಮಾಡಲಾಗಿರುತ್ತದೆ. ನಿರ್ವಹಿಸಿದ ಎಲ್ಲಾ ಕಾಮಗಾರಿಗಳನ್ನು ನಿಯಮಾನುಸಾರ ಅನುಷ್ಠಾನಗೊಳಿಸಲಾಗಿದ್ದು , ಯಾವುದೇ ರೀತಿಯ ಅವ್ಯವಹಾರ / ಹಣ ದುರುಪಯೋಗ ಮಾಡಿರುವುದಿಲ್ಲಾ. ಮುಂದುವರಿದು ಸದರಿ ಯೋಜನೆಯಡಿ ಮಾನ್ಯ ಓಂಬಡ್ಸಮನ್ ರವರುವರು ಸದರಿ ಕಾಮಗಾರಿಗಳ ಕುರಿತು ಸಮಗ್ರ ತನಿಖೆಯನ್ನು ಕೈಗೊಂಡು ತಮ್ಮ ಆದೇಶದಲ್ಲಿ ಸದರಿ ಕಾಮಗಾರಿಗಳನ್ನು ನಿಯಮಾನುಸಾರ ಕೈಗೊಂಡಿರುವುದಾಗಿ ದಿನಾಂಕ:30-05-2017 ರ ಆದೇಶ ನೀಡಿರುತ್ತಾರೆ.ಸದರಿ ಆದೇಶ ಪ್ರತಿಗಳನ್ನು ತಮ್ಮ ಅವಗಾಹಣೆಗಾಗಿ ಲಗತ್ತಿಸಲಾಗಿದೆ. ಆದ್ದರಿಂದ ಈ ನೋಟಿಸಿನಲ್ಲಿ ಸೂಚಿಸಿದ ಮೊತ್ತ ರೂ.21,59,413/-ಗಳನ್ನು ದುರುಪಯೋಗ ಪಡಿಸಿಕೊಂಡಿರುವ ಆರೋಪವನ್ನು ನಾನು ಒಪ್ಪುವುದಿಲ್ಲಾ.

ಗ್ರಾಮ ಪಂಚಾಯತ ಸದಸ್ಯರು ಚುನಾವಣಾ ಪೂರ್ವದಲ್ಲಿ ಶೌಚಾಲಯ ನಿರ್ಮಿಸಿ ಅರ್ಜಿ ಸಲ್ಲಿಸಿದ್ದು ಅನುದಾನದ ಕೊರತೆಯಿಂದಾಗಿ ನಂತರದಲ್ಲಿ ದಿನಾಂಕ 31/07/2015 ರ ಗ್ರಾಮಸಭೆಯ ನಿರ್ಣಯದ ಮೂಲಕ ಅನುದಾನದ ಲಭ್ಯತೆಯನ್ನು ಆದರಿಸಿ ಸ್ವಚ್ಛ ಭಾರತ ಮಿಷನದಡಿ ನಿಯಮಾನುಸಾರ ಸ್ಥಳ ಪರಿಶೀಲನೆ ನಡೆಸಿ ಫಲಾನುಭವಿಗಳ ನೈಜತೆಯನ್ನು ಖಾತರಿ ಪಡಿಸಿಕೊಂಡು ಪ್ರೋತ್ಸಾಹ ಧನವನ್ನು ಚೆಕ್ಕ ಮೂಲಕ ಪಾವತಿಸಿದೆ. ಹಾಗೂ ಶೌಚಾಲವನ್ನು ಸಂಬಂದಿಸಿದ ಫಲಾನುಭವಿಯೇ ನಿರ್ಮಿಸಿಕೊಂಡಿದ್ದು ಬೇರೆಯವರ ಹೆಸರಿನಲ್ಲಿ ಪ್ರೋತ್ಸಾಹ ಧನ ಪಾವತಿಸಿರುವದಿಲ್ಲ. ಮುಂದುವರೆದು ಸದರಿ ವಿಷಯದ ಕುರಿತು ಮಾನ್ಯ ಲೋಕಾಯುಕ್ತರು ಬೆಂಗಳೂರು ಇವರಲ್ಲಿ ಸಲ್ಲಿಸಿದ ದೂರುಗಳ ಸಂಖ್ಯೆ :

1):ನಂ.ಕಂಪ್ಲೆಂಟ್/ಲೋಕ್/ಬಿಜಿಎಮ್/1756/2016/ಎಆರ್ ಎಲ್ ಓ-3
2):ನಂ.ಕಂಪ್ಲೆಂಟ್/ಲೋಕ್/ಬಿಜಿಎಮ್/1757/2016/ಎಆರ್ ಎಲ್ ಓ-3
3):ನಂ.ಕಂಪ್ಲೆಂಟ್/ಲೋಕ್/ಬಿಜಿಎಮ್/1758/2016/ಎಆರ್ ಎಲ್ ಓ-3
4) :ನಂ.ಕಂಪ್ಲೆಂಟ್/ಲೋಕ್/ಬಿಜಿಎಮ್/1756/2016/ಎಆರ್ ಎಲ್ ಓ-3 ಗಳನ್ನು ಮಾನ್ಯ ಲೋಕಾಯುಕ್ತರು ದೂರನ್ನು ಪರಿಶೀಲಿಸಿ ಮುಕ್ತಾಯಗೊಳಿಸಿರುತ್ತಾರೆ. ಸದರಿ ಆದೇಶ ಪ್ರತಿಗಳನ್ನು ತಮ್ಮ ಅವಗಾಹಣೆಗಾಗಿ ಲಗತ್ತಿಸಲಾಗಿದೆ. ಆದ್ದರಿಂದ ಸದರಿ ಆರೋಪದಲ್ಲಿ ಯಾವುದೇ ರೀತಿಯ ಸತ್ಯಾಂಶ ಇರುವುದಿಲ್ಲಾ.

ಆದ್ದರಿಂದ ತಮ್ಮ ಕಾರಣ ಕೇಳುವ ನೋಟಿಸಿಗೆ ಹಾಗೂ ಮಾನ್ಯ ಉಪಲೋಕಾಯುಕ್ತ-1 ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3)ರ ವರದಿ ಸಂಖ್ಯೆ: compt/UPLOK/BGM-1652/2016/PP ದಿನಾಂಕ:30.06.2018 ಕ್ಕೆ ವಿವರವಾದ ನನ್ನ ವಿವರಣೆಯನ್ನು ನೀಡಿರುತ್ತೇನೆ.

ಕರ್ನಾಟಕ ಸರಕಾರದ ಅಧೀನ ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಬಂದ ಕಾರಣ ಕೇಳುವ ನೋಟೀಸ್ ದಿನಾಂಕ :30-06-2018 ನ್ನು ದಿನಾಂಕ : 19-07-2018 ರಂದು ಕರೆದ ವಿಶೇಷ ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಿ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12 (3) ರ ವರದಿ ಸಂಖ್ಯೆ: COMPT/UPLOK/BGM-1652/2016/PP ದಿನಾಂಕ:30-05-2018 ರಂದು ಕರ್ನಾಟಕ ಸರಕಾರಕ್ಕೆ ಗ್ರಾಮ ಪಂಚಾಯತ ಅಧಿನಿಯಮ 1993 ರ ಅಡಿಯಲ್ಲಿ ಶಿಫಾರಸ್ಸು ಮಾಡಿದ್ದಕ್ಕೆ ಸೂಕ್ತ ಸ್ಪಷ್ಟೀಕರಣ ನೀಡಲು ಮತ್ತು ಪಂಚಾಯತಿಯಲ್ಲಿ ಯಾವುದೇ ಅವ್ಯವಹಾರವಾಗಿರುವದಿಲ್ಲವೆಂದು ಮತ್ತು ಸದರಿ ಕಾಮಗಾರಿಗಳನ್ನು ಮಾನ್ಯ ಓಂಬಡ್ಸ್‌ಮನ್ ಅಧಿಕಾರಿಗಳು ಹಾಗೂ ಲೆಕ್ಕ ಪರಿಶೋಧನಾ ತಂಡದವರು ಯಾವುದೇ ತರಹದ ಆಕ್ಷೇಪಣೆ ಎತ್ತದೇ ಇರುವದರಿಂದ ಲೋಕಾಯುಕ್ತರ ವರದಿಯಲ್ಲಿ ಸೂಚಿಸಿದ ಅಂಶಗಳಿಗೆ ಉತ್ತರ ಹಾಗೂ ದಾಖಲಾತಿಗಳನ್ನು ಪೂರೈಸಲು ಪಂಚಾಯತಿ ಅಧ್ಯಕ್ಷರಿಗೆ ಸಂಪೂರ್ಣ ಅಧಿಕಾರ ನೀಡಿರುತ್ತಾರೆ.

ಮಾನ್ಯರು, ಮೇಲಿನ ಅಂಶಗಳನ್ನು ಕೂಲಂಕಶವಾಗಿ ಪರಿಶೀಲಿಸಿ , ನನ್ನ ಮೇಲೆ ಆರೋಪಿಸಿರುವಂತೆ ನಾನು ಯಾವುದೇ ರೀತಿಯ ಹಣ/ಅಧಿಕಾರ ದುರುಪಯೋಗ ಮಾಡಿರುವುದಿಲ್ಲ ಹಾಗೂ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಅವ್ಯವಹಾರ ಮಾಡಿರುವದಿಲ್ಲ. ಇನ್ನುಳಿದ ಅವಧಿಯಲ್ಲಿ ಗ್ರಾಮದ ಸರ್ವಾಂಗೀಣ ಪ್ರಗತಿ ಕೈಗೊಳ್ಳಲು ಅನುವು ಮಾಡಿಕೊಡಲು ವಿನಂತಿಸಿರುತ್ತಾರೆ.

5) ಪ್ರಕರಣದ ವಿಚಾರಣೆಯನ್ನು ದಿನಾಂಕ 07.12.2018ರಂದು ಜರುಗಿಸಲಾಗಿದೆ. ಆಪಾದಿತ ಅಥಣಿ ತಾಲ್ಲೂಕಿನ ಉಗಾರ ಬಿ.ಕೆ. ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ಶೈನಾಜ ಆಸ್ಕರ ಜಮಖಾನೆ, ಅಥಣಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಉಗಾರ ಬಿ.ಕೆ. ಗ್ರಾಮ ಪಂಚಾಯತಿಯ ಅಂದಿನ ಹಾಗೂ ಹಾಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಾಜರಾಗಿರುತ್ತಾರೆ.

6) ಸರ್ಕಾರದಿಂದ ಕಾರಣ ಕೇಳಿ ನೋಟೀಸಿಗೆ ಆಪಾದಿತರು ಲಿಖಿತ ಹೇಳಿಕೆ ಸಲ್ಲಿಸಿ, ಅಂದಾಜು ಪತ್ರಿಕೆ ಪ್ರಕಾರ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ, ಯಾವುದೇ ರೀತಿಯ ಹಣ ದುರುಪಯೋಗ ಆಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಅಂದಿನ ಪಂಚಾಯತಿ ಅಭಿವೃದ್ಧ ಕಾರ್ಯನಿರ್ವಾಹಕ ಅಧಿಕಾರಿಗಳು ಸಹ ಕಾಮಗಾರಿಗಳು ಅಂದಾಜು ಪತ್ರಿಕೆಯ ಪ್ರಕಾರ ಆಗಿವೆ ಹಾಗೂ ಯಾವುದೇ ಹಣ ದುರುಪಯೋಗವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಕಾರ್ಯನಿರ್ವಾಹಕ ಅಧಿಕಾರಿಗಳು ಈಗಾಗಲೇ ಕಾಮಗಾರಿಗಳನ್ನು ಮತ್ತು ಶೌಚಾಲಯಗಳನ್ನು ಪರಿಶೀಲನೆ ನಡೆಸಿದ್ದು ಕ್ರಿಯಾಯೋಜನೆಯಂತೆ ಕಾಮಗಾರಿಗಳು ನಡೆದಿರುವುದಾಗಿ ತಿಳಿಸಿರುತ್ತಾರೆ. ಓಂಬುಡ್ಸ್‌ಮನ್ ನ್ಯಾಯಾಲಯದಲ್ಲಿಯೂ ಆರೋಪಗಳು ಸಾಬೀತಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಕಾರ್ಯನಿರ್ವಾಹಕ ಅಧಿಕಾರಿಗಳು ಶೌಚಾಲಯಗಳನ್ನು ಹಾಗೂ ಫಲಾನುಭವಿಗಳ ಅರ್ಹತೆಯನ್ನು ಪರಿಶೀಲಿಸಿ, ಕ್ರಮಬದ್ಧವಾಗಿ ನಿರ್ಮಾಣವಾಗಿರುವುದಾಗಿ ಯಾವುದೇ ಅವ್ಯವಹಾರಗಳು ಇರುವುದಿಲ್ಲವೆಂದು ಲಿಖಿತವಾಗಿ ವರದಿ ಸಲ್ಲಿಸಿರುತ್ತಾರೆ.

7) ಬೆಳಗಾವಿ ಜಿಲ್ಲಾ ಪಂಚಾಯತಿಯ ಓಂಬುಡ್ಸ್‌ಮನ್‌ರವರ ನ್ಯಾಯಾಲಯದಲ್ಲಿ ಆರೋಪಗಳು ಸಾಬೀತಾಗಿರುವುದಿಲ್ಲ ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳು ಕಾಮಗಾರಿಗಳು ಕ್ರಮಬದ್ಧವಾಗಿ ನಡೆದಿರುವುದಾಗಿ ಹಾಗೂ ಯಾವುದೇ ಅವ್ಯವಹಾರಗಳು ಇರುವುದಿಲ್ಲವೆಂದು, ಶೌಚಾಲಯಗಳು ಕ್ರಮಬದ್ಧವಾಗಿ ನಿರ್ಮಾಣವಾಗಿರುತ್ತವೆ ಎಂದು ಲಿಖಿತವಾಗಿ ವರದಿ ಸಲ್ಲಿಸಿದ್ದು, ಆರೋಪಗಳು ಸಾಬೀತಾಗದಿರುವ ಹಿನ್ನಲೆಯಲ್ಲಿ, ಉಗಾರ ಬಿ.ಕೆ. ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ಶೈನಾಜ ಆಸ್ಕರ ಜಮಖಾನೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 48(4) ಮತ್ತು 43(ಎ) ರನ್ವಯ ಪ್ರಾರಂಭಿಸಲಾದ ಕ್ರಮ/ವಿಚಾರಣೆಯನ್ನು ಕೈಬಿಡಲು ನಿರ್ಣಯಿಸಲಾಗಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 302 ಗ್ರಾಪಂಕಾ 2018 ಬೆಂಗಳೂರು, ದಿನಾಂಕ: 07.03.2018

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೆಳಗಾವಿ ಜಿಲ್ಲಾ ಪಂಚಾಯತಿಯ ಓಂಬುಡ್ಸ್‌ಮನ್‌ರವರ ನ್ಯಾಯಾಲಯದಲ್ಲಿ ಆರೋಪಗಳು ಸಾಬೀತಾಗಿರುವುದಿಲ್ಲ ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳು ಕಾಮಗಾರಿಗಳು ಕ್ರಮಬದ್ಧವಾಗಿ ನಡೆದಿರುವುದಾಗಿ ಹಾಗೂ ಯಾವುದೇ ಅವ್ಯವಹಾರಗಳು ಇರುವುದಿಲ್ಲವೆಂದು, ಶೌಚಾಲಯಗಳು ಕ್ರಮಬದ್ಧವಾಗಿ ನಿರ್ಮಾಣವಾಗಿರುತ್ತವೆ ಎಂದು ಲಿಖಿತವಾಗಿ ವರದಿ ಸಲ್ಲಿಸಿದ್ದು, ಆರೋಪಗಳು ಸಾಬೀತಾಗದಿರುವ ಹಿನ್ನಲೆಯಲ್ಲಿ, ಉಗಾರ ಬಿ.ಕೆ. ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ಶೈನಾಜ ಅಸ್ಕರ ಜಮಖಾನೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 48(4) ಮತ್ತು 43(ಎ) ರನ್ವಯ ಪ್ರಾರಂಭಿಸಲಾದ ಕ್ರಮ/ವಿಚಾರಣೆಯನ್ನು ಕೈಬಿಟ್ಟು ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

7/3/18

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿ:

1) ಮಾನ್ಯ ಉಪಲೋಕಾಯುಕ್ತರವರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
2) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಳಗಾವಿ ಜಿಲ್ಲಾ ಪಂಚಾಯತಿ, ಬೆಳಗಾವಿ ಅಗತ್ಯ ಕ್ರಮಕ್ಕಾಗಿ.
4) ಕಾರ್ಯನಿರ್ವಾಹಕ ಅಧಿಕಾರಿ, ಅಥಣಿ ತಾಲ್ಲೂಕು ಪಂಚಾಯತಿ, ಅಥಣಿ, ಬೆಳಗಾವಿ ಜಿಲ್ಲೆ.
   (ಸಂಬಂಧಪಟ್ಟವರಿಗೆ ಈ ಆದೇಶದ ಪ್ರತಿಯನ್ನು ತಲುಪಿಸಿ,ಸ್ವೀಕೃತಿಯನ್ನು ಸರ್ಕಾರಕ್ಕೆ ಕಳುಹಿಸಲು ತಿಳಿಸಿದೆ)
5) ಶ್ರೀಮತಿ ಶೈನಾಜ ಅಸ್ಕರ ಜಮಖಾನೆ, ಅಧ್ಯಕ್ಷರು, ಉಗಾರ ಬಿ.ಕೆ. ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ
6) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಉಗಾರ ಬಿ.ಕೆ. ಗ್ರಾಮ ಪಂಚಾಯತಿ, ಅಥಣಿ ತಾ., ಬೆಳಗಾವಿ ಜಿಲ್ಲೆ
7) ಗಣಕ ಕೋಶ – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
8) ಹೆಚ್ಚುವರಿ ಪ್ರತಿ.

ಪ್ರತಿಯನ್ನು ಮಾಹಿತಿಗಾಗಿ:

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾ.ಅ. & ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3) ಸರ್ಕಾರದ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾ.ಅ. & ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.